ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ವಾತೆಜಂಆ/ಡಿಜಿಎಸ್‌ಟಿಓ/ಕ/ವಾ.ಶಾ/2022-23/1433

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ,
(ಆಡಳಿತ) ಡಿಜಿಎಸ್‌ಟಿಓ ಕಲಬುರಗಿ ವಿಭಾಗ,
ಕಲಬುರಗಿ ದಿನಾಂಕ:-28.02.2023.

ಇವರಿಗೆ,
ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು
ವಾಣಿಜ್ಯ ತೆರಿಗೆ ಕಾರ್ಯಾಲಯ,
ಗಾಂಧಿನಗರ, ಕವಿಕಾಳಿದಾಸ ರಸ್ತೆ,
**ಬೆಂಗಳೂರು-560 009**

ಮಾನ್ಯರೇ,

ವಿಷಯ:- ಖಾಸಗಿ ವಾಹನಗಳ ಸೇವೆಯನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಟೆಂಡರ್ ಪ್ರಕಟಣೆಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:- ವಾಣಿಜ್ಯ ತೆರಿಗೆಗಳ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ: ವಿಹೆಚ್‌ಟಿ/ಸಿಆರ್-15/2022-23 ದಿನಾಂಕ:22-12-2022.

********

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈ ವಿಭಾಗದ ವಾಣಿಜ್ಯ ತೆರಿಗೆಗಳ ಕಛೇರಿಗಳಿಗೆ ಹನ್ನೆರೆಡು(12) ವಾಹನಗಳನ್ನು, ಮಾಲೀಕರೇ ವಾಹನದ ಚಾಲಕರಾಗಿರುವ/ಅಧಿಕೃತ ಟ್ರಾವೆಲ್ ಏಜನ್ಸಿದಾರರು/ಸಂಸ್ಥೆ ಇವರಿಂದ ಖಾಸಗಿ ವಾಹನಗಳ ಸೇವೆಯನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ದಿನಾಂಕ: 28-02-2023 ರಂದು ಟೆಂಡರ್ ಅಧಿಸೂಚನೆಯನ್ನು ಹೊರಡಿಸಿದ್ದು, ವೆಬ್‌ಸೈಟ್ http://www.ctax.kar.nic.in ನಲ್ಲಿ ಅಪ್‌ಲೋಡ್ ಮಾಡಬೇಕಾಗಿ ಗೌರವಪೂರ್ವಕವಾಗಿ ವಿನಂತಿಸಲಾಗಿದೆ.

ತಮ್ಮ ವಿಶ್ವಾಸಿ,

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ) ಡಿಜಿಎಸ್‌ಟಿಓ, ಕಲಬುರಗಿ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ) ಡಿ.ಜಿ.ಎಸ್.ಟಿ.ಓ. ಕಲಬುರಗಿ.

ಅಡಕ: ಟೆಂಡರ್ ಅಧಿಸೂಚನೆ.

O/c

ರವಾನಿಸಲಾಗಿದೆ
ಸಹಿ.......... 28/2/23

**ಕರ್ನಾಟಕ ಸರ್ಕಾರ**

(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ವಾತೆಜಂಆ/ಡಿಜಿಎಸ್‌ಟಿಓ/ಕ/ವಾ.ಶಾ/2022-23

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ,
(ಆಡಳಿತ) ಡಿಜಿಎಸ್‌ಟಿಓ ಕಲಬುರಗಿ ವಿಭಾಗ,
ಕಲಬುರಗಿ ದಿನಾಂಕ:-28.02.2023.

## : ಟೆಂಡರ್ ಪ್ರಕಟಣೆ :

ಸನ್ 2023-24 ನೇ ಸಾಲಿಗೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಕಲಬುರಗಿಗೆ ಕ್ರಮವಾಗಿ ಹನ್ನೆರೆಡು (12) ಮಾಲೀಕರೇ ಚಾಲಕರಾಗಿರುವ /ಅಧಿಕೃತ ಟ್ರಾವೆಲ್ ಏಜನ್ಸಿದಾರರು/ಸಂಸ್ಥೆ ಮುಖಾಂತರ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು(ಕೇಂದ್ರ ಕಛೇರಿ)-2 ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ವಿಹೆಚ್‌ಟಿದಿನಾಂಕ:23-08-2012 ರ ಆಧಾರದ ಮೇಲೆ ವಾಹನಕ್ಕೆ 2,500 ಕಿ.ಮೀ ಗೆ ಗರಿಷ್ಠ ಮಾಸಿಕ ಮೊತ್ತ ರೂ.35,000-00 ರಂತೆ (ಹವಾ ನಿಯಂತ್ರಿತವಲ್ಲದ) ಹಾಗೂ ಹವಾ ನಿಯಂತ್ರಿತ ವಾಹನಕ್ಕೆ ರೂ.40,000-00 ಗಳಿಗೆ ಒಳಪಟ್ಟಿರುತ್ತದೆ. ಈ ಕುರಿತು ಟೆಂಡರ್ ವಿವರಗಳನ್ನು ಇಲಾಖೆಯ ಸೂಚನಾ ಫಲಕದಲ್ಲಿ ಹಾಗೂ ವೆಬ್‌ಸೈಟ್ http://www.ctax.kar.nic.in ನಲ್ಲಿ ಸಂಬಂಧಿಸಿದ ವಿವರವಾದ ಷರತ್ತುಗಳನ್ನು ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದೊಳಗೆ ವಾಹನ ಶಾಖೆಗೆ ಅಥವಾ ದೂರವಾಣಿ ಸಂಖ್ಯೆ:08472-222051 ಯನ್ನು ಸಂಪರ್ಕಿಸಬಹುದು.

**ವಿವರಗಳು**

| ಕ್ರಂ.ಸಂಖ್ಯೆ | ಕಛೇರಿ | ವಾಹನಗಳ ಸಂಖ್ಯೆ |
|---|---|---|
| 1 | ಕಲಬುರಗಿ | 07 |
| 2 | ರಾಯಚೂರು | 02 |
| 3 | ಯಾದಗಿರ | 01 |
| 4 | ಬೀದರ | 01 |
| 5 | ಶಹಾಪೂರ | 01 |
| ಒಟ್ಟು | | **12** |

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.03.2023 ಸಮಯ ಸಂಜೆ 5.00 ಗಂಟೆಗೆ**

**ಟೆಂಡರ್ ತೆರೆಯುವ ದಿನಾಂಕ: 17.03.2023 ಸಮಯ ಬೆಳಿಗ್ಗೆ 11.00 ಗಂಟೆಗೆ**

**(ದ್ವಿ-ಲಕೋಟೆ ಪದ್ಧತಿ)**

ಸಹಿ/-

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ) ಡಿಜಿಎಸ್‌ಟಿಓ, ಕಲಬುರಗಿ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಆಡಳಿತ) ಡಿ.ಜಿ.ಎಸ್.ಟಿ.ಓ. ಕಲಬುರಗಿ.